**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 804/2020

ಸಿ.ಡಬ್ಲೂಃ 4 ಪಿ.ಡಬ್ಲೂಃ 4

ಹೆಸರುಃ ಶೇಖರಗೌಡ

ತಂದೆಯ ಹೆಸರುಃ ಬಸನಗೌಡ ಜಕ್ಕನಗೌಡ್ರ

ವಯಸ್ಸುಃ 49 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 09/08/2023 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ –ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದಃ**

**1.** ಚಾಸಾ–1 ನನ್ನ ತಮ್ಮ . ನನ್ನ ತಂದೆ ಬಸನಗೌಡನಿಗೆ ನಾವು 7 ಜನ ಮಕ್ಕಳು. ಅವರ ಹೆಸರು 1) ಮಲ್ಲನಗೌಡ್ರ 2) ಶಂಕರಗೌಡ್ರ 3) ರಾಮನಗೌಡ್ರ 4) ಈರನಗೌಡ್ರ 5) ಶೇಖರಗೌಡ್ರ 6) ರಾಜುಗೌಡ್ರ 7) ಶಿವನಗೌಡ್ರ. ಚಾಸಾ–8 ನನ್ನ ಅಣ್ಣನ ಮಗ. ಆಸ್ತಿ ಸಲುವಾಗಿ 1 ನೇ ಆರೋಪಿ ಮತ್ತು ಚಾಸಾ–8 ತಂಟೇ ಮಾಡುತ್ತಿದ್ದರು. ಸುಮಾರು 3 ವರ್ಷಗಳ ಹಿಂದೆ ನಮ್ಮ ಮನೆಯ ಹತ್ತಿರ 1 ನೇ ಆರೋಪಿ ಚಾಸಾ–8 ರವರಿಗೆ ಆಸ್ತಿ ಸಂಬಂಧ ಜಗಳ ಮಾಡುತ್ತಿದ್ದಾಗ ನಾನು ಮನೆಯ ಒಳಗಡೆ ಇದ್ದೆ. ಈ ಗಲಾಟೆ ಶಬ್ದ ಕೇಳಿ ಹೊರಗಡೆ ಬಂದೆ. ಆಗ ಚಾಸಾ–5 ರಿಂದ 7 ಇದ್ದರು. ನಾನು ಮನೆಯಿಂದ ಹೊರಗಡೆ ಬರುವಷ್ಟರಲ್ಲಿ 1, 2 ಆರೋಪಿತರು ಚಾಸಾ–8 ರವರ ಜೊತೆ ಗಲಾಟೆ ಮಾಡಿಕೊಂಡು ಚಾಸಾ–1 ಮತ್ತು 8 ರವರ ಕೈಯಿಗೆ ಹಲ್ಲೆ ಆಗಿ ಗಾಯವಾಗಿತ್ತು. ಆ ಸಂಬಂಧ ಅವರನ್ನು ರೋಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು. ನಾನು ರೋಣ ಆಸ್ಪತ್ರೆಗೆ ಹೋಗುವಷ್ಟರಲ್ಲಿ ಅವರನ್ನು ಗದಗಿಗೆ ಕರೆದುಕೋಂಡು ಹೋಗಿದ್ದರು. ಆರೋಪಿ ಮತ್ತು ಚಾಸಾ–8 ಕೈ ಕೈ ಮಿಲಾಯಿಸಿ ಹೊಡೆದಾಡಿದ್ದಾಗಿ ನನಗೆ ಗೊತ್ತಾಯಿತು. ಈ ಗಲಾಟೆಯಾದಾಗ ಮದ್ಯಾಹ್ನದ ಸಮಯವಾಗಿತ್ತು.

(ಈ ಹಂತದಲ್ಲಿ ಸಾಕ್ಷಿಯನ್ನು ಮಾನ್ಯ ಸ ಸ ಅ ರವರು ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಸ.ಸ.ಅ. ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1. ದಿಃ 16-05-2020 ರಂದು ಸಂಜ್ಞ 6-00 ಗಂಟೆಗೆ ನಮ್ಮ ಮನೆಯ ಮುಂದೆ ನಾನು ಮತ್ತು ಚಾಸಾ-5 ರಿಂದ 7 ಹಾಗೂ ಚಾಸಾ-1 ಮತ್ತು 8 ನಿಂತು ಪಾಲುವಿಭಾಗದ ಬಗ್ಗೆ ಮಾತನಾಡುತ್ತಿದ್ದಾಗ ಅಲ್ಲಿಗೆ 1 ಮತ್ತು 2 ನೇ ಆರೋಪಿತರು ಬಂದು ನಮಗೆ ಹೊಲದಲ್ಲಿ ಸರಿಯಾಗಿ ಪಾಲು ಮಾಡಿಕೊಟ್ಟಿಲ್ಲ ಅಂತಾ ಪ್ರಶಾಂತ ಇವನು ಚಾಸಾ-1 ಮತ್ತು 8 ರವರಿಗೆ ಬೊಸಡಿ ಮಕ್ಕಳ ಎಂದು ಬೈದಾಡಿ, 1 ನೇ ಆರೋಪಿ ತನ್ನ ಕೈಯಲ್ಲಿದ್ದ ಉಳಿಯ ತುಂಬಿನಿಂದ ಶಿವನಗೌಡ ಇವನ ಬಲಗಡೆ ಬುಜಕ್ಕೆ ಹೊಡೆದ ಎಂದರೆ ಸರಿಯಲ್ಲ. ಆಗ ಚಾಸಾ-8 ಜಗಳ ಬಿಡಿಸಲು ಹೋದಾಗ ಅವನಿಗೂ ಸಹ ಅದೇ ಉಳಿಯಿಂದ ಎಡಗೈ ಮುಂಗೈ ಮೇಲೆ ಹೊಡೆದು ಗಾಯಪಡಿಸಿದ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾಸಾ-8 ರವರಿಗೆ ಕಟ್ಟಿಗೆ ಬಡಿಗೆಯಿಂದ ಬೆನ್ನಿಗೆ ಮತ್ತು ತೊಡೆಗೆ ಹೊಡೆದ ಎಂದರೆ ಸರಿಯಲ್ಲ. ಆಗ ನಾನು, ಚಾಸಾ-9, 10, 11, 5 ರಿಂದ 7 ಅವರು ಹೊಡಿ ಬಡಿ ಮಾಡುವುದನ್ನು ಬಿಡಿಸಿ ಕಳುಹಿಸಿದೆವು ಎಂದರೆ ಸರಿಯಲ್ಲ. ಆಗ ಚಾಸಾ-1 ಮತ್ತು 8 ರವರನ್ನು ಖಾಸಗಿ ವಾಹನದಲ್ಲಿ ರೋಣ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಹಾಗೂ ಚಾಸಾ-8 ರವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋಗ ವಿಚಾರ ಗೊತ್ತಾಯಿತು ಎಂದರೆ ಸರಿಯಲ್ಲ.

ಸಾಕ್ಷಿಗೆ ಈಗ ಸ.ಸ.ಅ. ರವರು ಆತನ ಹೇಳಿಕೆಯ ಭಾಗವನ್ನು ಓದಿ ಹೇಳಿರುತ್ತಾರೆ. ಸಾಕ್ಷಿ ಅದನ್ನು ತಿಳಿದುಕೊಂಡು ಅದನ್ನು ತಾನು ಪೋಲಿಸರ ಮುಂದೆ ನೀಡಿಲ್ಲ ಎಂದು ಹೇಳಿರುತ್ತಾರೆ. ಸಾಕ್ಷಿ ಒಪ್ಪದ ಹೇಳಿಕೆಯ ಭಾಗವಾದ "ನಿನ್ನೆಯ ದಿವಸ 16-05-2020 ರಂದು....... ವಿಷಯ ನನಗೆ ಗೊತ್ತಿದೆ " ಇದನ್ನು ನಿಪಿಃ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರು ಏನು ಇಲ್ಲಾ ಎಂದು ಹೇಳುತ್ತಾರೆ.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ**
**ನ್ಯಾಯಾಧೀಶರು ರೋಣ .**